ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 :** **ದಿನಾಂಕ: 3–12–2019**

**ಪತ್ರಿಕಾ ಆಮಂತ್ರಣ**

1. **ಕರ್ನಾಟಕ ಶಿಲ್ಪಕಲಾ ಅಕಾಡೆಮಿ ವತಿಯಿಂದ 2018 ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಹದಿನಾಲ್ಕನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2018.**

**ಉದ್ಘಾಟನೆ:**

**ಶ್ರೀ ಗೋವಿಂದ ಎಂ. ಕಾರಜೋಳ,**
**ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ**
**ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರು.**

**ಗೌರವ ಪ್ರಶಸ್ತಿ ಪ್ರದಾನ:**

**ಶ್ರೀ ಸಿ.ಟಿ. ರವಿ,**
**ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಹಾಗೂ**
**ಸಕ್ಕರೆ ಇಲಾಖೆ ಸಚಿವರು.**

**ವಾರ್ಷಿಕ ಶಿಲ್ಪಕಲಾ ಬಹುಮಾನ ವಿತರಣೆ ಬಿಡುಗಡೆ**

**ಡಾ. ಚಂದ್ರಶೇಖರ ಕಂಬಾರ,**
**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.**
**ದಿನಾಂಕ: 4–12–2019 ಬುಧವಾರ ಸಮಯ: ಸಂಜೆ 5.00 ಗಂಟೆಗೆ**

**ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.**

**14ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2018**

**ಉದ್ಘಾಟನೆ**
**ಶ್ರೀ ಬಿ.ಸು. ಕೃಷ್ಣಶೆಟ್ಟಿ**
**ಹಿರಿಯ ಕಲಾವಿದರು, ಬೆಂಗಳೂರು**

**ದಿನಾಂಕ: ದಿನಾಂಕ: 4–12–2019 ಬುಧವಾರ ಸಮಯ: ಸಂಜೆ 4.30 ಗಂಟೆಗೆ**

**ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಎರಡನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು.**

**ಪತ್ರಿಕಾ ಪ್ರಕಟಣೆ**

# ಉಪ ಚುನಾವಣೆ ನಡೆಯುವ
# ವಿಧಾನಸಭಾ ವ್ಯಾಪ್ತಿಯಲ್ಲಿ ಸಾರ್ವತ್ರಿಕ ರಜೆ

ಬೆಂಗಳೂರು, ಡಿಸೆಂಬರ್ 3 (ಕರ್ನಾಟಕ ವಾರ್ತೆ

ಚುನಾವಣಾ ಕ್ಷೇತ್ರಗಳ ಪೈಕಿ 162. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿನ ಸರ್ಕಾರಿ ಕಚೇರಿ/ಸಂಸ್ಥೆಗಳನ್ನು ಹೊರತುಪಡಿಸಿ ಉಪ ಚುನಾವಣೆ ನಡೆಯುತ್ತಿರುವ ಎಲ್ಲಾ ವಿಧಾನಸಭಾ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಎಲ್ಲಾ ರಾಜ್ಯ ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ) ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಒಳಗೊಂಡಂತೆ ದಿನಾಂಕ: 5–12–2019 ರಂದು ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿನ ಸರ್ಕಾರಿ ಕಚೇರಿ/ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಉಪ ಚುನಾವಣೆ ನಡೆಯುತ್ತಿರುವ ಕ್ಷೇತ್ರಗಳ ವ್ಯಾಪ್ತಿಯ ಹೊರಗಡೆ ಕೆಲಸ ನಿರ್ವಹಿಸುತ್ತಿದ್ದು ಮತ್ತು ಉಪ ಚುನಾವಣೆ ನಡೆಯುತ್ತಿರುವ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನೋಂದಾಯಿತ ಮತದಾರರಾಗಿರುವವರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ದಿನಾಂಕ: 05–12–2019 ರ ಗುರುವಾರದಂದು ಪ್ರಜಾಪ್ರತಿನಿಧಿ ಕಾಯ್ದೆ 1951 ರ ಸೆಕ್ಷನ್ – 135 ಬಿ ರಡಿಯಲ್ಲಿ ವೇತನ ಸಹಿತ ರಜೆಯನ್ನು ಘೋಷಿಸಿ ಆದೇಶಿಸಿದೆ.

ಉಪ ಚುನಾವಣೆ ನಡೆಯುವ ವಿಧಾನಸಭಾ ಕ್ಷೇತ್ರಗಳ ಅರ್ಹ ಮತದಾರರಾಗಿರುವ ಎಲ್ಲಾ ವ್ಯವಹಾರಿಕ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರ ಸಂಸ್ಥೆಗಳಲ್ಲಿ ಖಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಪ್ರಜಾಪ್ರತಿನಿಧಿ ಕಾಯ್ದೆ 1951 ರ ಸೆಕ್ಷನ್ –135 ಬಿ ರಡಿಯಲ್ಲಿನ ಎಲ್ಲಾ ಉಪಬಂಧಗಳಿಗೆ ಒಳಪಟಟು ದಿನಾಂಕ: 05–12–2019 ರ ಗುರುವಾರದಂದು ವೇತನ ಸಹಿತ ರಜೆ ನೀಡಲು ಈ ಮೂಲಕ ಆದೇಶಿಸಿದೆ.

ಈ ಮೇಲ್ಕಂಡ ಆದೇಶವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ 1881 ರಡಿ ಬರುವ ಎಲ್ಲಾ ಸಂಸ್ಥೆಗಳಿಗೂ ಸಹ ಅನ್ವಯಿಸುತ್ತದೆ.

ಈ ರಜೆಯು ತುರ್ತು ಸೇವೆಗಳಿಗೆ ಅನ್ವಯಿಸುದಿಲ್ಲ. ಆದಾಗ್ಯೂ ಕೂಡ ತುರ್ತು ಸೇವೆಯಡಿ ಕೆಲಸ ಮಾಡುವ ನೌಕರರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡತಕ್ಕದ್ದು.

# 2018 ರ ಗೌರವ ಪ್ರಶಸ್ತಿ ಪ್ರದಾನ ಹಾಗೂ ಹದಿನಾಲ್ಕನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2018

ಬೆಂಗಳೂರು, ಡಿಸೆಂಬರ್ 3 (ಕರ್ನಾಟಕ ವಾರ್ತೆ)

ಡಿಸೆಂಬರ್ 4 ರಂದು ಬುಧವಾರ ಸಂಜೆ 5–00 ಗಂಟೆಗೆ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಹಾಗೂ ಹದಿನಾಲ್ಕನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2018 ಸಮಾರಂಭವು ಅಂದು ಸಂಜೆ 4.30 ಗಂಟೆಗೆ ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2018 ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆಯನ್ನು ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರು ಆದ ಶ್ರೀ ಗೋವಿಂದ ಎಂ. ಕಾರಜೋಳ, ನೆರವೇರಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಹಾಗೂ ಸಕ್ಕರೆ ಇಲಾಖೆ ಸಚಿವ ಶ್ರೀ ಸಿ.ಟಿ. ರವಿ ಅವರು ಗೌರವ ಪ್ರಶಸ್ತಿ ಪ್ರದಾನ ಮಾಡುವರು.

ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಚಂದ್ರಶೇಖರ ಕಂಬಾರ ಅವರು ವಾರ್ಷಿಕ ಶಿಲ್ಪಕಲಾ ಬಹುಮಾನ ವಿತರಣೆ ಬಿಡುಗಡೆ ಮಾಡುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಶ್ರೀ ಎಸ್. ರಂಗಪ್ಪ ಅವರು ಪ್ರಶಸ್ತಿ ಪುರಸ್ಕೃತರ ಕಿರುಹೊತ್ತಿಗೆ ಬಿಡುಗಡೆ ಮಾಡುವರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಶ್ರೀ ವೀರಣ್ಣಾ ಮಾ. ಅರ್ಕಸಾಲಿ ಅವರು ಆಶಯ ನುಡಿ ಮಾಡುವರು. ಶ್ರೀ ಆರ್.ಜಿ. ಸಿಂಗ್, ಕಾರ್ಯದರ್ಶಿಗಳು, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ, ಮೈಸೂರು. ಶ್ರೀ ರೂಪಾ ಗಂಗಾಧರ್ ಬಡಿಗೇರ, ವಿಜಯಪುರ ಹಾಗೂ ಶಿಲ್ಪಿ ರು. ಕಾಳಾಚಾರ್, ನಾರಾಯಣಗೊಂಡನಹಳ್ಳಿ, ಚಿತ್ರದುರ್ಗ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## 2018 ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರು:

ಬಾಗಲಕೋಟೆಯ ಜಿಲ್ಲೆಯ ಶ್ರೀ ದ್ಯಾಮಣ್ಣ ಕಾಳಪ್ಪ ಬಡಿಗೇರ, ರಾಮನಗರ ಜಿಲ್ಲೆಯ ಶ್ರೀ ಅಶೋಕ್ ಗುಡಿಗಾರ್, ವಿಜಯಪುರ ಜಿಲ್ಲೆಯ ಡಾ. ಶಿವಾನಂದ ಹೆಚ್. ಬಂಟನೂರ, ಶಿವಮೊಗ್ಗ ಜಿಲ್ಲೆಯ ಶ್ರೀ ಜಯರಾಂ ಬಿ.ಎನ್. ಹಾಗೂ ಉಡುಪಿ ಜಿಲ್ಲೆಯ ಶ್ರೀಮತಿ ರತ್ನ ಟಿ.ಎನ್. ಅವರಿಗೆ ಪ್ರಶಸ್ತಿ ಲಭಿಸಿದೆ.

## ಹದಿನಾಲ್ಕನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನಿತರು:

ಮೈಸೂರಿನ ಶ್ರೀ ನವೀನ್‌ಕುಮಾರ್ ಎಸ್, ಉತ್ತರ ಕನ್ನಡದ ಶ್ರೀ ಮುಕುಂದ ಎಂ. ಗೌಡ, ಬಾಗಲಕೋಟೆಯ ಶ್ರೀ ದಾನಯ್ಯ ಎಸ್. ಚೌಕಿಮಠ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶ್ರೀ ಮಧುಸೂದನ್ ಹೆಚ್. ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಜಯಚಂದ್ರ ಎನ್. ಬೆಂಗಳೂರು ಗ್ರಾಮಾಂತರ ಜಿಲ್ಲೆಯ

ಶ್ರೀ ಶಿವಕುಮಾರ್. ಬಳ್ಳಾರಿಯ ವೀರಾಚಾರಿ ಬಿ, ಉಡುಪಿಯ ಶ್ರೀ ಸಂದೀಪ್ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಜಿ.ಎಸ್. ಮೋಹನ್‌ಕುಮಾರ್ ಅವರಿಗೆ ಬಹುಮಾನ ಲಭಿಸಿದೆ.

## ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆ

ಬೆಂಗಳೂರು, ಡಿಸೆಂಬರ್ 3 (ಕರ್ನಾಟಕ ವಾರ್ತೆ)

ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಯನ್ನು 2019 ರಲ್ಲಿ ಬೆಂಗಳೂರಿನಲ್ಲಿ ನಡೆಸಲು ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿಯು ನಿರ್ಧರಿಸಿದೆ. ಈ ಪರೀಕ್ಷೆಗೆ ಸ್ಥಳ ಮತ್ತು ದಿನಾಂಕಗಳನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಆಸಕ್ತ ಅಭ್ಯರ್ಥಿಗಳು ಪರೀಕ್ಷೆಯ ಅರ್ಜಿ ಮತ್ತು ಅನುಬಂಧಗಳನ್ನು ಕಾರ್ಯದರ್ಶಿಗಳು, ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ನೆಲಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029 ಇಲ್ಲಿ ಸಲ್ಲಿಸಬಹುದಾಗಿದೆ.

ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿಧಾನ ಹಾಗೂ ಈ ಪರೀಕ್ಷೆಗೆ ಸಂಬಂದಿಸಿದ ಹೆಚ್ಚಿನ ವಿವರಗಳನ್ನು ಇಲಾಖೆಯ ವೆಬ್‌ಸೈಟ್ www.karnataka.gov.in.esurakshate ಅಥವಾ FBIS-Homepage ರಿಂದ ಪಡೆದುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## Boiler Operation Engineers Examination

**Bengaluru 3rd December (Karnataka Information)**

The Boiler Operation Engineers examination board has decided to conduct the next Boiler Operation Engineers Examination at Bengaluru in the year 2019. The exact date and place of the examination will be intimated later to the candidates.

Interested candidates can submit applications along with annexure to Secretary , Boiler Operation Engineer's Board, 2nd Floor, Kalyana Suraksha Bhavana, Near Dairy Circle, Bannerughatta Road, Bengaluru – 560 029.

The candidates appearing for the said examination, may download the application form along with the instructions sheet from the official page in FBIS-Homepage or website www.karnataka.gov.in.esurakshate.

## ಜಾನುವಾರು ಅಭಿವೃದ್ಧಿ ಮತ್ತು ಪಶುಪಾಲನೆ : ಕೇಂದ್ರ ಪುರಸ್ಕೃತ ಯೋಜನೆಗೆ ಅನುದಾನ

ಬೆಂಗಳೂರು, ಡಿಸೆಂಬರ್ 3 (ಕರ್ನಾಟಕ ವಾರ್ತೆ)

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ, ರಾಜ್ಯದಲ್ಲಿ ಜಾನುವಾರು ಅಭಿವೃದ್ಧಿ ಮತ್ತು ಪಶುಪಾಲನೆಯಲ್ಲಿ ತೊಡಗಿರುವ ರೈತರ ಹಿತರಕ್ಷಣೆಗಾಗಿ ಕೇಂದ್ರ ಪುರಸ್ಕೃತ ಮತ್ತು ಶೇ 100 ರಾಜ್ಯ ಅನುದಾನಿತ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ. ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಮತ್ತು ಅಗತ್ಯ ಮಾಹಿತಿ ನೀಡುವ ಅಗತ್ಯವಿರುತ್ತದೆ.

1. ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮ:

ರಾಜ್ಯದಲ್ಲಿ ಕೃತಕ ಗರ್ಭಧಾರಣೆ ಪ್ರಮಾಣ ಕಡಿಮೆ ಇರುವ 17 ಜಿಲ್ಲೆಗಳಲ್ಲಿ (ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲ್ಬುರ್ಗಿ, ಕೊಡಗು, ಕೊಪ್ಪಳ, ರಾಯಚೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಯಾದಗಿರಿ), ಪ್ರತಿ ಜಿಲ್ಲೆಯ ಆಯ್ದ 100 ಗ್ರಾಮ/ ಗ್ರಾಮಗುಚ್ಛಗಳಲ್ಲಿ, 200 ತಳಿಸಂವರ್ಧನೆ ಯೋಗ್ಯ ರಾಸುಗಳಲ್ಲಿ ಉತ್ಕೃಷ್ಟ ತಳಿಯ ವೀರ್ಯವನ್ನು ಬಳಸಿ, ಗರಿಷ್ಟ ಮೂರು ಬಾರಿ, ಪಶುಪಾಲಕರ ಮನೆ ಬಾಗಿಲಿಗೆ ತೆರಳಿ ಉಚಿತವಾಗಿ ಕೃತಕ ಗರ್ಭಧಾರಣೆ ಸೌಲಭ್ಯ ಒದಗಿಸಲಾಗುತ್ತಿದೆ.

2. ಜಾನುವಾರು ವಿಮಾ ಯೋಜನೆ:-

ಅ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳ ಜಾನುವಾರುಗಳಿಗೆ ಉಚಿತವಾಗಿ ವಿಮೆ ಸೌಲಭ್ಯ ಒದಗಿಸುವುದು.

ಆ. ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳ (ಶೇ 30%), ಜಾನುವಾರುಗಳಿಗೆ ಫಲಾನುಭವಿಗಳ ವಂತಿಗೆ (ಬಿಪಿಎಲ್ ಫಲಾನುಭವಿಗಳಿಂದ ಶೇ 50%, ಎಪಿಎಲ್, ಹಾಗೂ ಪ.ಜಾ, ಮತ್ತು ಪ.ಪಂ.ದ ಫಲಾನುಭವಿಗಳಿಂದ ಶೇ 30%), ಮತ್ತು ಸರ್ಕಾರದ ಸಹಾಯಧನದ ಮೂಲಕ ವಿಮೆ ಸೌಲಭ್ಯ ಒದಗಿಸುವುದು.

3. ವಿಮೆಗೆ ಒಳಪಡದ ರಾಸುಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಪರಿಹಾರ ಧನ ನೀಡುವ ಯೋಜನೆ

ವಿಮೆಗೆ ಒಳಪಡದ ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ಗರಿಷ್ಠ ರೂ. ಹತ್ತು ಸಾವಿರಗಳ ಪರಿಹಾರ ಧನ ನೀಡಲಾಗುವುದು.

4. ಮೇವು ಕತ್ತರಿಸುವ ಯಂತ್ರಗಳ ವಿತರಣೆ:

ಸರ್ಕಾರದ ಸಹಾಯಧನ ಮತ್ತು ಘಟಕದ ವೆಚ್ಚದ ಶೇ 50%ರ ಫಲಾನುಭವಿಗಳ ವಂತಿಗೆ (ರೂ 9,900ಗಳು) ಅನ್ನು ಪಡೆದು ಮೇವು ಕತ್ತರಿಸುವ ಯಂತ್ರಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುವುದು.

5. ಜಲಕೃಷಿ ಘಟಕಗಳನ್ನು ವಿತರಿಸುವುದು.

ಸರ್ಕಾರದ ಸಹಾಯಧನ ಮತ್ತು ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಘಟಕದ ಮೌಲ್ಯದ ಶೇ 10% ಫಲಾನುಭವಿಗಳಿಂದ ವಂತಿಗೆ (ರೂ 5,740), ಮತ್ತು ಪ.ಜಾ. ಮತ್ತು ಪ.ಪಂ.ದ ಫಲಾನುಭವಿಗಳಿಂದ ರೂ. 1,000ಗಳ ಫಲಾನುಭವಿ ವಂತಿಗೆಯನ್ನು ರಾಜ್ಯದ ಜಾನುವಾರು ಕ್ಷೇತ್ರಗಳಲ್ಲಿ ತರಬೇತಿ ಪಡೆದ ಫಲಾನುಭವಿಗಳಿಂದ ಪಡೆದು ಜಲಕೃಷಿ ಘಟಕ (Hydroponics) (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳ ವಂತಿಗೆ ರೂ. 1000, ಸಾಮಾನ್ಯ ವರ್ಗ ರೂ. 5740) ಘಟಕಗಳನ್ನು ವಿತರಿಸಲಾಗುವುದು.

6. ಕುರಿ, ಮೇಕೆ ಹಂದಿ ಸಾಕಾಣಿಕೆ ಘಟಕಗಳನ್ನು ವಿತರಿಸುವುದು.

ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆ ಅಡಿಯಲ್ಲಿ ಕುರಿ (10+1) ಘಟಕ (ಘಟಕದ ವೆಚ್ಚ ರೂ 66,000), ಮೇಕೆ (10+1) ಘಟಕ (ಘಟಕದ ವೆಚ್ಚ ರೂ 66,000) ಮತ್ತು ಹಂದಿ (4+1) ಘಟಕ (ಘಟಕದ ವೆಚ್ಚ ರೂ 21,000) ಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಘಟಕದ ವೆಚ್ಚದ ಶೇ.10 ರ ವಂತಿಗೆ ಪಡೆದು ಸಾಕಾಣಿಕಾ ವೆಚ್ಚವನ್ನು ವಿತರಿಸಲಾಗುವುದು. ಸದರಿ ಯೋಜನೆಯಡಿ ಅರ್ಜಿಗಳನ್ನು ಪಶುಭಾಗ್ಯ ತಂತ್ರಾಂಶದ ಮೂಲಕ ಸಲ್ಲಿಸಬೇಕಾಗಿರುತ್ತದೆ.

7. ಸ್ವಯಂಸೇವಾ ಸಂಸ್ಥೆಗಳು ನಿರ್ವಹಿಸುತ್ತಿರುವ ಗೋಶಾಲೆಗಳಿಗೆ ಸಹಾಯಧನ ನೀಡುವುದು.

ಯೋಜನೆಯ ಅಡಿ ಸ್ವಯಂಸೇವಾ ಸಂಸ್ಥೆಗಳು ನಿರ್ವಹಿಸುತ್ತಿರುವ ಗೋಶಾಲೆಗಳಿಗೆ ಸಹಾಯಾನುದಾನ ನೀಡಲಾಗುವುದು. ಪ್ರತಿ ಸಂಸ್ಥೆಯಿಂದ ಗರಿಷ್ಠ 200 ರಾಸುಗಳ ನಿರ್ವಹಣೆಗೆ, ಪ್ರತಿ ಜಾನುವಾರು ನಿರ್ವಹಣೆಗೆ ಪ್ರತಿ ದಿನಕ್ಕೆ ರೂ. 17.50 ರಂತೆ ಒಂದು ವರ್ಷದ ಅನುದಾನವನ್ನು ನೀಡಲಾಗುವುದು ಹಾಗೂ ಒಂದು ಬಾರಿ ಮೂಲಭೂತ ಸೌಕರ್ಯಗಳಿಗಾಗಿ ಶೇ.50 ರಂತೆ, ಗರಿಷ್ಠ ರೂ.10 ಲಕ್ಷದವರೆಗೆ ಅನುದಾನ ನೀಡಲಾಗುವುದು.

8. ಮೈತ್ರಿ ಕಾರ್ಯಕ್ರಮ:

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಮತ್ತು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳಿಂದ ಪಶುವೈದ್ಯಕೀಯ ಸೇವೆ ದೊರಕದಿರುವ ಪ್ರದೇಶಗಳಲ್ಲಿ ಕೃತಕಗರ್ಭಧಾರಣೆ ಮತ್ತು ಇತರ ಪಶುವೈದ್ಯಕೀಯ ಸೇವೆಗಳನ್ನು ಒದಗಿಸಲು ಸ್ಥಳೀಯ ಕಾರ್ಯಕರ್ತರನ್ನು ತರಬೇತಿಗೊಳಿಸಿ, ಪ್ರತಿ ಮಾಹೆಗೆ ಮೊದಲ ವರ್ಷ ರೂ 1500, ಎರಡನೆಯ ವರ್ಷ ರೂ 1200, ಮತ್ತು ಮೂರನೆಯ ವರ್ಷ ರೂ 800ರಂತೆ ಮಾಸಿಕ ಭತ್ಯೆ ನೀಡಲಾಗುವುದು.

ಈ ಎಲ್ಲಾ ಯೋಜನೆಗಳ ಸವಲತ್ತುಗಳನ್ನು ಪಡೆಯಲು ಹತ್ತಿರದ ಪಶು ವೈದ್ಯಕೀಯ ಸಂಸ್ಥೆಯ ಅಧಿಕಾರಿಗಳನ್ನು /ತಾಲ್ಲೂಕು ಸಹಾಯಕ ನಿರ್ದೇಶಕರನ್ನು/ ಜಿಲ್ಲಾ ಉಪ ನಿರ್ದೇಶಕರನ್ನು ಅಥವಾ ಇಲಾಖೆಯ ಸಹಾಯವಾಣಿ ಸಂಖ್ಯೆ 08023417100, 1800 425 0012 ಅನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.